



## ಕಷ್ಟ ಆಗುತ್ತಿದೆಯೇ ನಿನಗೆ ನಿಲ್ಲಲು!?

‘ನೀನು ನನ್ನ ಜೊತೆಗೆ ಮಾತುಕತೆ ಇರಲಿ’
ಬೆಳೆ ಕಟಾವು ತನಕ
ನನಗೆ ಬರೀ ತವಕ!? ಯಾಕ?
ಬೆಳೆ ಬಂದರೆ ಚೆನ್ನಾಗಿ
ಕೀಟ ಬಾಧೆ
ಮಧ್ಯವರ್ತಿಗಳ ತಗಾದೆ
‘ಅಕ್ಕ ಪಕ್ಕದವರ ಕಣ್ ಎಸರು’
ಯಾರಿಗೆ ಹೇಳಬೇಕು
ತಲ್ಲಣಗಳ ಬದುಕು

ಕೀಟ,ಇಲಿ ಹೆಗ್ಗಣ ಪ್ರಾಣಿ ಪಕ್ಷಿಗಳ ಕಾಟ
‘ತಪ್ಪಿಸಿಕೊಳ್ಳಲು ನಿನ್ನ ಕೃಪಾಕಟಾಕ್ಷ !!’
ಬೇಸರಿಕೆ ಬೇಡ!
ಮಳೆ, ಗಾಳಿ, ಚಳಿ, ಬಿಸಿಲು
ಇರಲಿ ಎನ್ನ ಮೇಲೆ ಪ್ರೀತಿ ಪಾಲು
ತೆನೆ ತುಂಬುವುದು ಹಾಲು
ಅಲ್ಲಿ ತನಕ ಇರಲಿ ಜೊತೆಗೆ ಕೋಲು !!

‘ಬೆದರು ಬೊಂಬೆ’
ನಿನ್ನ ನೋಡಿ ಓಡುವರು ದುಷ್ಟ ಮಂದಿ
ಬರಲಾರದು ಯಾವ ಹಂದಿ!
‘ಆಗದಿರಲಿ ಬಾಳು ಚಂದಿ’
ಕಾಯುತ್ತಾ ಇರು, ‘ಶಿವನ ಮುಂದಿನ ನಂದಿ!!’
ಹೊಸ ವರ್ಷದ ದಾರಿಗೆ ನೀಡು ನಾಂದಿ !!

**-ಪ್ರಭಾ ತನಯ ಪ್ರಸಾದ್**
**ಕುಣಿಗಲ್**

## ಶ್ರಮಿಕ...

ನಾಡ ತುಂಬ ಬರೀ ಮಿಕಗಳೇ
ಅಲೆಯುತ್ತಿವೆ; ಹೇಸಿಗೆ ತಿನ್ನುತ್ತಲೇ
ಶ್ರಮ ಅವುಗಳಿಗೆ ಲೆಕ್ಕಕ್ಕಿಲ್ಲ...

‘ರಾಜಕಾರಣ’? ಇದೊಂದೇ ಅಲ್ಲ
ಹಿರೀಕರ ಧನ ಸಂಪತ್ತು ಹೆಪ್ಪಾಗಿದೆ
ಅದೇ ಇವುಗಳಿಗೆ ತುಪ್ಪವಾಗಿದೆ...

ಹಸಿರು ಹೊದ್ದ ಫಸಲು ಹುಲುಸಾಗಿದೆ
ದುಡಿದ ರಟ್ಟೆಗೆ ಬೆಲೆ ಬೇಕಿದೆ;
ಹಸಿದ ಒಡಲು ರೊಟ್ಟಿಗೆ ಕಾದಿದೆ...

ಬೆದರು ಬೊಂಬೆ ನೇಪಥ್ಯಕ್ಕೆ
ಈಗ ಮೋಸದಾಟ ನಡೆಯದು
ಕಣ್ಣೆದುರು ಹಾರುವ ಹಕ್ಕಿಗಳೂ
ಜಪ್ಪೆನ್ನುವುದಿಲ್ಲ...

ಶ್ರಮ ಶ್ರಮಿಕ ಎಂದೂ ಹಸಿದುಕೊಳ್ಳುವುದಿಲ್ಲ;
ಮುಗಿಲೊಳಗಿನ ಮೋಡ ನೆಲದೊಳಗಿನ ತೇವ
ಎಂದೂ ಕೈ ಬಿಡುವುದಿಲ್ಲ.

**-ಶಿ.ಕಾ. ಬಡಿಗೇರ, ಭಾಗ್ಯನಗರ**